ತುಮಕೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್.

ತಾರೀಖು 2ನೇ ಜೂನ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ್ನ 1896—97ನೇ ಸಾಲಿಗೆ ಅಂದರೆ ಸ್ನ 1896ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು ಸ್ನ 1897ನೇ ಇಸವಿ ಜೂನ್ 30ನೇ ತಾರೀಖು ವರಿಗೆ ಬಾಜೂದಲ್ಲಿ ಕಂಡ ಗುಬ್ಬೀ ತಾಲ್ಲೂಕು ಗ್ರಾಮಗಳಲ್ಲಿರುವ ಡಿಸ್ಟ್ರಿಕ್ಟ್ ಪಾರೆಸ್ಟ್‌ಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಸರಕಾರಿ ಬಂಜರು ಜಮೀನುಗಳಲ್ಲಿಯೂ ಮತ್ತು ಬಾಜೂದಲ್ಲಿ ಕಂಡ ಅಮೃತಮಹಲ್ ಕಾವಲುಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸುಗಳನ್ನ ಜಮಾಯಿಸಿಕೊಳ್ಳುವ ಹಕ್ಕು ದಾರಿಯನ್ನ ಅಮಲ್ದಾರ್‌ವರ ರೂಬರೂ 1896ನೇ ಇಸವಿ ಜುಲೈ ತಾರೀಖು 8ರಲ್ಲು ಗುಬ್ಬೀ ತಾಲ್ಲೂಕು ಕಚೇರಿಯಲ್ಲಿ ಹರಾಜ್ ಮಾಡಲ್ಪಡುತ್ತೆ. ಹರಾಜು ಮಧ್ಯಾನ್ನ 12 ಘಂಟೆಗೆ ಷುರೂ ಆಗುತ್ತೆ. ಈ ಹರಾಜು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರ ಮಂಜೂರಾತಿಗೆ ವಳಪಟ್ಟಿರುತ್ತೆ.

(1) ಹಾಗಲವಾಡಿ ಸಮ್ಮತು ಹರಳಕೆರೆ ನಾಯಕನಕೆರೆ ವಗೈರೆ
(2) ಹಾಗಲವಾಡಿ ಸಮ್ಮತು ಮಂಜಲಘೊರಫಿರ್ಕಾ ಗ್ರಾಮಗಳು
(3) ಚಿಟ್ಟನಹಳ್ಳಿ ಸಮ್ಮತು ಹರಳಕೆರೆ ವಗೈರೆ ಗ್ರಾಮಗಳು
(4) ನಿಟ್ಟೂರು ಸಮ್ಮತು ಕೊಂಡ್ಲಿ ಫಿರಕಾ ಕರಡಿಕಲ್ಲು ವಗೈರೆ ಗ್ರಾಮಗಳು
(5) ಜೇಳೂರು ಸಮ್ಮತು ಹುಪ್ಪಿನ ಕಟ್ಟನಲ್ಲಿರುವ ವಗೈರೆ ಗ್ರಾಮಗಳು

ಅಮೃತಮಹಲ್ ಕಾವಲುಗಳು.

(1) ಗುಬ್ಬೀ ಸಮ್ಮತು ಬಿಕ್ಕೆಗುಡ್ಡದ ಕಾವಲು
(2) ಡಿಟೋ ಬಸ್ತಿಕಟ್ಟೆ ಕಾವಲು
(3) ಡಿಟೋ ಗುಬ್ಬೀ ಅಮಾನೀಕೆರೆ ವಳಗೆರೆ ಕಾವಲು
(4) ಡಿಟೋ ಚಿಟ್ಟನಹಳ್ಳಿ ಸಮ್ಮತು ನಾಗೇಗವುಡನಬ್ಯಾಲ ಕೆಂಚೇಗವುಡನ ಬ್ಯಾಲ
(5) ಡಿಟೋ ಹಿಂಡಿಸಿಗೆರೆ ಕಾವಲು
(6) ಡಿಟೋ ಚಿಟ್ಟನಹಳ್ಳಿ ವಳಗೆರೆ ಕಾವಲು
(7) ಡಿಟೋ ಕಾಡಾಲದ ಗಿಡದ ಕಾವಲು
(8) ಡಿಟೋ ಇಡಗೂರುಕೆರೆ ಹಿಂದಣ ಕಗ್ಗಲಿ ಕಾವಲು
(9) ಹಾಗಲವಾಡಿ ಸಮ್ಮತು ಯರೆ ಕಾವಲು
(10) ಕಲ್ಲೂರು ಮಾಗಣಿ ಬಸವಸಾಗರದ ಕಾವಲು
(11) ಡಿಟೋ ಕಲ್ಲೂರುಕೆರೆ ಹಿಂದಣ ಜಾಲಿ ಕಾವಲು
(12) ನಿಟ್ಟೂರು ಮಾಗಣಿ ಬಿದರಹಳ್ಳಿ ಕಾವಲು
(13) ಡಿಟೋ ಈಜಲು ಕಾವಲು
(14) ದಂಡಿನಶಿವರದ ಮಾಗಣಿ ಸಾಗೆಹಳ್ಳಿಕೆರೆ ಕಾವಲು
(15) ಕಡಬ ಮಾಗಣಿ ಕಡಬ ವಳಗೆರೆ ಕಾವಲು
(16) ಜೇಳೂರು ಮಾಗಣಿ

(1) ಅಳಲೇಕಾಯಿ
(2) ತಾರೇಕಾಯಿ
(3) ದಿಂಡ ಸೋಪ್ಪು
(4) ಕಪಿಲಾರಂಗು
(5) ಪತಂಗ
(6) ಹೊಂಗೇಬೀಜ
(7) ಗೇರುಬೀಜ
(8) ಆವರಿಕೆ ಗೋಂದು
(9) ಬ್ಯಾಲದಹಣ್ಣು ಮುಂತಾದ್ದೆ

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರ್ರಿಂದ ಚಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಒಂದಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲ್ಮಾಡಲ್ಪಡುವದು.

3. ಕಿಪ್ತ ಕಾಲದವಳಗೇ ಪೂರಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ತೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಕೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ಅವ್ವಲ್ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಘಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳಕಡಿಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಪಿ. ವೆಂಕಟರಾವ್,
ಘೂರ್ ಆ॥ ಡೆಪ್ಯೂಟಿ ಕಮ್ಮಿಷನರ್.

ಮೈಸೂರ್ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾದ ಜೋಡಿ ದೊಡ್ಡಸೋಮನಹಳ್ಳಿ ಜೋಡಿದಾರ್ ತಮ್ಮಯ್ಯ ವಗೈರೆ 7 ಜನಗಳಿಂದ ಬರಬೇಕಾದ ಜಮ್ಮಾ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ಕೃಷ್ಣರಾಜಪೇಟೆ ತಾಲ್ಲೂಕು ಕಚೇರೀಲಿ 1896ನೇ ಇಸವಿ ಜುಲೈ 20ನೇ ತಾರೀಖಿನಲ್ಲಿ ಒಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದ್ದೆ.

ಹರಾಜು ಆ ದಿವಸ ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 308—15—10 ರೂಪಾಯಿ ಆಗಿರುತ್ತೆ.